**Crl. Misc. No. 129/2024** **RW - 1**

ದಿನಾಂಕಃ **15.11.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ಬಿ. ಎಸ್ ಪಿ ವಕೀಲರಿಂದಃ

ನನ್ನ ಚಿಕ್ಕ ವಯಸ್ಸಿನಲಿ ನನ್ನ ತಂದೆ ಅವರ ಕೆಲಸನಿಂದ retire ಆಗಿ ತೋಟ ನೋಡಿಕೊಳ್ಳುತ್ತಿದ್ದರು. ಅವರು ಕೆಲಸ ಮಾಡುತ್ತಿದ್ದ ಕಚೇರಿ ದಾಖಲೆಗಳು ಇಲ್ಲ. ನನ್ನ ತಂದೆ ಕೆಲಸದಲ್ಲಿ ಇರಲಿಲ್ಲ, ಆದ್ದರಿಂದ ದಾಖಲೆ ಇಲ್ಲ, ಆದ್ದರಿಂದ ಈ ಆಸ್ತಿಗಳೆಲ್ಲ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಹೈ ಸೂಡ್ಲೂರು ಗ್ರಾಮದಲ್ಲಿ ಶೆಟಲ್ ಆಡುವ ಕೋರ್ಟ್ ಇದೆ. ಇದರಿಂದ ನನಗೆ ಮಾಸಿಕ ಆದಾಯ ಇದೆ ಎಂದರೆ ಸರಿಯಲ್ಲ, ಅಲ್ಲಿನ ಊರಿನವರು free ಆಗಿ ಆಟ ಆಡುತ್ತಾರೆ. ಈ ಆಡುವ ಕೋರ್ಟ್ ಗೆ ದಿನ maintenance ಖರ್ಚು ಇದೆ ಎಂದರೆ ಸರಿಯಲ್ಲ. ಇದರ ಹಣದ ನಿರ್ವಹಣೆ books of account maintain ಮಾಡುತ್ತಿದೇನೆ ಎಂದರೆ ಸರಿಯಲ್ಲ. ನನ್ನ ಮಕ್ಕಳಿಗೆ ಪ್ರತ್ತೇಕವಾಗಿ ವಿಭಾಗದಲ್ಲಿ ಯಾವುದೇ ಜಮೀನು ತೋರಿಸಿಲ್ಲ. ನನ್ನ ತಾಯಿಗೂ ಜಮೀನಿನಲ್ಲಿ ಭಾಗ ಕೊಟ್ಟಿದ್ದಾರೆ. ನನ್ನ ಹೆಂಡತಿಗೂ ಯಾವುದೇ ಆಸ್ತಿ ಭಾಗ ಆಗಿಲ್ಲ. ನನ್ನ ಹೆಂಡತಿ ಆಗಾಗ ಆತ್ಮಹತ್ತೆ ಮಾಡಿಕೊಳ್ಳುತ್ತೇನೆ ಎಂದು ಹೇಳಿರುವ ಬಗ್ಗೆ ಪೊಲೀಸ್ ದೂರು ಕೊಟ್ಟಿಲ್ಲ.

ಮದುವೆ ಆದಾಗಿನಿಂದ 3 ರಿಂದ 4 ಪಂಚಾಯಿತಿಗಳು ಆಗಿದೆ. ಈ ಪಂಚಾಯಿತಿಯಲ್ಲಿ ಅರ್ಜಿದಾರರ ತಂದೆ ತಾಯಿ ಮತ್ತು ಅವರ ಅಣ್ಣ ಇದ್ದರು. ಯಾವಾಗ ಈ ಪಂಚಾಯಿತಿಗಳಾಗಿದೆ ಎಂದು ಹೇಳಲಾಗುವುದಿಲ್ಲ. ಗೋಣಿಕೊಪ್ಪದಲ್ಲಿ ನಮ್ಮ ಮನೆಯಲ್ಲಿ ಬಾಡಿಗೆಯಲ್ಲಿರುವ ಪುಷ್ಪಾರವರ ಜೊತೆ ನನಗೆ ಸಂಬಂದವಿರುವುದಾಗಿ ಜಗಳ ಆಗುತ್ತಿತ್ತು ಎಂದರೆ ಸರಿಯಲ್ಲ. ನನ್ನ ಮತ್ತು ಪುಷ್ಪಾರವರ ನಡುವೆ ಫೋನ್‌ನಲ್ಲಿ ಕರೆಗಳು ಮತ್ತು message ಗಳು ಮಾಡಿಕೊಳ್ಳುತ್ತಿದೆವು ಎಂದರೆ ಸರಿಯಲ್ಲ. ನಾನು ಅರ್ಜಿದಾರಳ ವಿಚ್ಚೇದನಕ್ಕೆ ಅರ್ಜಿ ಕೊಟ್ಟಿರುವುದು ಸರಿ, ಆದರೆ ಪುಷ್ಪಾರವರನ್ನು ವಿಚ್ಚೇದನೆ ನಂತರ ಮದುವೆ ಮಾಡಿಕೊಳ್ಳುವುದು ಸರಿಯಲ್ಲ.

**Crl. Misc. No. 129/2024** **RW - 1**

ಉದ್ದೇಶಪೂರ್ವಕವಾಗಿ ನನ್ನ ಮಕ್ಕಳಿಗೆ ಹೈಸೂಡ್ಲೂರಿನಲ್ಲಿ ನನ್ನ ತಂದೆ ತಾಯಿ ಮತ್ತು ಹೆಂಡತಿ ಜೊತೆ ಇರಲು ಅನೂಕೂಲವಿದ್ದರೂ ಕೂಡ ಗೋಣಿಕೊಪ್ಪದಲ್ಲಿ ಇಟ್ಟಿದ್ದೇನೆ ಎಂದರೆ ಸರಿಯಲ್ಲ. ಮಕ್ಕಳು ತಾಯಿಯ ಜೊತೆ ಇಲ್ಲದಿರುವುದರಿಂದ ಅವರಿಗೆ ಆರೋಗ್ಯ ಸಮಸ್ಯೆ ಆಗಿದೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ನನ್ನ ತಂದೆ ತಾಯಿ ಕಿರುಕುಳ ಕೊಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯನ್ನು ಹೈಸೂಡ್ಲೂರು ಮನೆಯಿಂದ ಓಡಿಸಲು ಪ್ರಯತ್ನ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ವಿಚ್ಛೇದನೆ ನೀಡಲು ನನ್ನ ಹೆಂಡತಿಗೆ ಬಲವಂತ ಪಡಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸಾಕಷ್ಟು ಆದಾಯವಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜೀವನಾಂಶ ಕೊಡಲು ನಾನು ಬದ್ದ ಎಂದರೆ ಸರಿಯಲ್ಲ. ಪುಷ್ಪಾರವರನ್ನು ಮದುವೆ ಆಗಲು ನನ್ನ ತಂದೆಯ ತಾಯಿಯ ಸಹಕಾರ ಇದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**sd/-**
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ